# ಕಾದಂಬರಿ- ಸಹಜ ಭಾಷೆಯ ಸಮರ್ಪಕ ನಿರೂಪಣೆ

ಗೀತಾ ನಾಗಭೂಷಣರವರ 'ಗುಳೆ' ಕಾದಂಬರಿ ಮುಂಬಯಿ ಕರ್ನಾಟಕ ಪ್ರದೇಶದ ಕಾರ್ಮಿಕರ ಜೀವನ, ಆಚಾರ-ವಿಚಾರಗಳನ್ನೊಳಗೊಂಡಂತೆ ಸಹಜ ಭಾಷೆಯಲ್ಲಿ ಸಮರ್ಪಕವಾಗಿ ನಿರೂಪಣೆಗೊಂಡಿತ್ತು. ಆದರೆ ದುರಂತದಲ್ಲಿ ಮುಕ್ತಾಯ ವಾದದ್ದು ಬೇಸರವಾಯಿತು. ಸ್ವಲ್ಪ ವಿಭಿನ್ನ ತಿರುವು ನೀಡಿ ಸುಖಾಂತ್ಯಗೊಳಿಸ ಬಹುದಿತ್ತೇನೊ.

– ರಘೋತ್ತಮ, ಮೈಸೂರು

## ನೈಜ ಕಥೆಯಲ್ಲಿ ಮಿಂದೆದ್ದ 'ಗುಳೆ'

ಆರಂಭದಿಂದಲೂ ಕಾದಂಬರಿ ಓದುತ್ತಾ ಬಂದಿದ್ದೇನೆ. ಅ.16ರ ಸಂಚಿಕೆಯಲ್ಲಿ ಧಾರಾವಾಹಿ ಕೊನೆಯಲ್ಲಿ 'ಮುಗಿಯಿತು' ಎಂದು ಓದಿದಾಗ 'ಛೆ ಇಷ್ಟು ಬೇಗ ಮುಗಿದುಹೋಯ್ತಾ' ಎಂದು ಅನಿಸಿತು. ಅಪ್ಪಟ ಹೈದರಾಬಾದ್ ಕರ್ನಾಟಕ ಭಾಷೆ, ಘಟನೆ ಮತ್ತು ಪೂರಕವಾದ ಪಾತ್ರಗಳು ನಾಟಕೀಯತೆಯಿಂದ ಹೊರ ಬಂದು ಅಕ್ಷರಶಃ ನೈಜ ಕಥೆಯಲ್ಲಿ ಮಿಂದಂತಿವೆ. ಇದೇ ಲೇಖಕಿಯಿಂದ ಇನ್ನೊಂದು ಕಾದಂಬರಿ ನಿರೀಕ್ಷಿಸಬಹುದೇ?

–ಅರವಿಂದ ಜಿ. ಜೋಷಿ, ಮೈಸೂರು

## ದುರಂತ ಅಂತ್ಯ

ದುರಂತ ಅಂತ್ಯ ಕಂಡ ವಸ್ತುವಾಗಿತ್ತು. ಗುಳೆ ಹೊರಟ ಮೇಲೆ ಎಲ್ಲಾದರೊಂದು ಕಡೆ ನೆಮ್ಮದಿ ಜೀವನ ಕಾಣುತ್ತಾರೆ ಎಂದು ಭಾವಿಸಿದ್ದೆವು. ಆದರೆ ಕಾದಂಬರಿಯನ್ನು ದುರಂತ ಅಂತ್ಯಕ್ಕೆ ತಂದದ್ದು ಬೇಸರವೆನಿಸಿತು. ಮನೋಹರ್ ಅವರ ಚಿತ್ರಕಲೆ ಸೊಗಸಾಗಿ ಮೂಡಿಬಂದಿದೆ.

–ಪ್ರದೀಪ್ ಎನ್., ಚೆಲುವರಸನ ಕೊಪ್ಪಲು

## ಸರ್ಯಾಗಿ ಬಂದದ

ಗುಳೆ ಹೊಂಟ ಮಂದಿ ಜೀವನಾ ಹ್ಯಾಂಗಿರತ್ತದಂತ ಗೀತಕ್ಕ ಬಾಳ ಛೊಲೊ ವಿವರಿಸಿದ್ದಾರ. ಇದನ್ನ ಓದಲಕ ನಾವ ವಾರ ವಾರ ಸುಧಾಕಿಗಾಗಿ ಕಾಯಲಕ ಹತ್ತಿರ್ತಿದ್ವಿ.

–ಪುಟ್ಟಗೌರಿ ಚಿದಾನಂದ ರೂಳೆ, ಗುಲ್ಬರ್ಗ

## ಸೊಗಸಾದ ಚಿತ್ರ

ಧಾರಾವಾಹಿಯಲ್ಲಿ ಬಂದ 'ಮನೋಹರ'ರವರ ಎಲ್ಲ ಚಿತ್ರಗಳು ಕ್ಯಾಮೆರಾದಲ್ಲಿ ಸೆರೆಹಿಡಿದ ಚಿತ್ರಗಳಂತಿದ್ದು ನೋಡಲು ಸೊಗಸಾಗಿತ್ತು.

–ಸುಶಾಂತ ಗಬಡಿ, ತೀರ್ಥಹಳ್ಳಿ

## ಪರಕಾಯ ಪ್ರವೇಶ

ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯ ಸೊಗಡಿನಿಂದ ಕೂಡಿದ ಧಾರಾವಾಹಿ ಉತ್ತಮವಾಗಿ ಮೂಡಿ ಬಂದಿದೆ. ಭಾಷೆಯನ್ನು ಓದಿದ ನಂತರ ಆಗುವ ಖುಷಿಯೇ ಅನನ್ಯ 'ಮಾತನಾಡಿದ ಹಾಗೆಯೇ ಬರೆಯೋದು' ಓದುಗರನ್ನು ಪಾತ್ರಗಳೊಂದಿಗೆ ಪರಕಾಯ ಪ್ರವೇಶ ಮಾಡಿಸಿದಂತಿತ್ತು.

–ರಾಜಶೇಖರ ಗೌಡ, ಕೊಟ್ಟೂರು

## ಅತಿಯಾದ ವರ್ಣನೆ

ಕಾದಂಬರಿ ಉತ್ತಮವಾಗಿ ಮೂಡಿಬಂದಿತ್ತು. ಅದಕ್ಕಾಗಿ ವಾರಪೂರ್ತಿ ಕಾಯುವಂತೆ ಮಾಡಿತ್ತು. ಭಾಷೆಯೂ ಸೊಗಸಾಗಿದೆ. ಆದರೆ ಸೆ.25ರ ಸಂಚಿಕೆಯಲ್ಲಿನ 'ನೀಲೂ'ಳ ಹೆಣ್ತನದ ವರ್ಣನೆ ತುಸು ಅತಿ ಆಯಿತೇನೋ ಎನಿಸಿತು. ಅದರಲ್ಲೂ ಮರಾಠಿ ಮಿಶ್ರಿತ ಕನ್ನಡದ ಗ್ರಾಮೀಣ ಭಾಷೆಯಲ್ಲಿ, ಅಳತಿ ಮಾಡಿ ತೂಗಿ ತೂಗಿ ಜೋಡಿಸಿಟ್ಟಂತಾ ಅಕಿನ ಮೈಯಾಗಿನ 'ಏರಿಳಿವುಗೋಳೇನು' ಎಂಬ ಪದ ಖಂಡಿತಾ ಬೇಕಾಗಿರಲಿಲ್ಲ. ಈ ಪದವನ್ನು ಬಲವಂತವಾಗಿ ತುರುಕಿದಂತಾಗಿದೆ.

–ಎಚ್.ಜಿ. ಜಗದೀಶ್, ಮೈಸೂರು

## ವೈಶಿಷ್ಟ್ಯಪೂರ್ಣ

ಉತ್ತಮ ಬದುಕು ಕಟ್ಟಿಕೊಳ್ಳಲು ಗುಳೆ ಹೋಗಿದ್ದ ಸಿರಿಮಂತ-ಹೊನ್ನಮ್ಮರ ಸಂಸಾರ ನೋಡು ನೋಡುತ್ತಿದ್ದಂತೆಯೇ ನುಚ್ಚುನೂರಾಯಿತು. ಬದುಕಲ್ಲಿ ಏನೆಲ್ಲ ಬವಣೆಗಳು ಎದುರಾಗುತ್ತವೆ ಎಂಬುದನ್ನು ಲೇಖಕಿ ಸವಿವರವಾಗಿ, ಆಪ್ತವಾಗಿ ಕಟ್ಟಿ ಕೊಟ್ಟಿರುವುದೇ ವೈಶಿಷ್ಟ್ಯಪೂರ್ಣ.

–ಶಂಕರೇಗೌಡ ತುಂಬಕೆರೆ, ಮಂಡ್ಯ

## ವ್ಯಥೆಯಾಯಿತು

ಸುಖ ಸಂತೋಷದ ಜೀವನ ಸಾಗಿಸಬೇಕಾದ ಒಂದು ಕುಟುಂಬದ ಬದುಕು ಈ ರೀತಿ ಅಂತ್ಯ ಕಾಣಬೇಕಾಯಿತಲ್ಲ ಎಂದು ಮನಸ್ಸಿಗೆ ತುಂಬ ವ್ಯಥೆಯಾಯಿತು.

–ನರಸಣ್ಣ ಎನ್. ನಾಟಿಕಾರ, ಚಿಂಚೋಳಿ, ಕೊಹಿಮ ಬಸರಕೋಡು, ಎಸ್. ವಿಜಯಕುಮಾರಿ

## ಬಾಳ ಚಂದ ಬರದಾರ್ರಿ

ಕತಿ ಬಾಳ ಚಂದ ಬರದಾರ್ರಿ, ಮತ್ತ ಮತ್ತ ಓದುವಂಗ ಆಗಾತೈತೆ. ಆಗಾಗ ಇಂತಾ ಧಾರಾವಾಹಿ 'ಸುಧಾ'ದೊಳಗ ಬರಬೇಕ್ರಿ.

–ಬಿ.ಎಸ್. ಮುಳ್ಳೂರ, ಹಲಗತ್ತಿ

## ಸಮುದ್ರ ಮಥನ

### ಉತ್ತಮ ಮಾಹಿತಿ




'ಚಿನ್ನದ ಬೇಟೆ' (ಸುಧಾ,ಅ.16) ಮುಖಪುಟ ಲೇಖನದಲ್ಲಿ ಲೇಖಕ ಪ್ರಮೋದ್ ಜಿ.ಕೆ.ಅವರು ಭಾರತದ ಆಟಗಾರರ ಛಲ, ದೇಶ ಪ್ರೇಮ, ಸತತ ಪ್ರಯತ್ನಗಳ ಕುರಿತು ನೀಡಿದ ಮಾಹಿತಿ ಉತ್ತಮವಾಗಿದೆ. ಹಿರಿಯ ಆಟಗಾರರು ಸ್ವಾರ್ಥಕ್ಕಾಗಿ ಏಷ್ಯನ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳದೇ ಇರುವುದು ನಿಜಕ್ಕೂ ಖಂಡನೀಯ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ವೈ.ಜಿ. ನರಸಿಂಹನ್, ಶಿವಮೊಗ್ಗ, ಪುಟ್ಟಗೌರಿ, ಗುಲ್ಬರ್ಗ, ಕೋಟೇಶ್ವರ ಸೂರ್ಯನಾರಾಯಣರಾವ್, ಎಂ.ಜಿ. ರಾಮಚಂದ್ರ, ಮಂಡಗಳಲೆ, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ, ಶೋಭಾ ಅರವಿಂದ, ಶಿವಮೊಗ್ಗ, ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಕಂಚಿನ ಪದಕ

ಚಿನ್ನದ ಬೇಟೆ ಲೇಖನ ಚೆನ್ನಾಗಿದೆ. ಇದರಲ್ಲಿರುವ 'ಚೀನಾ ಸಾಧನೆ ಸ್ಫೂರ್ತಿಯಾಗಲಿ' ಉಪಶೀರ್ಷಿಕೆಯ ಬರಹದಲ್ಲಿ 83 ಚಿನ್ನದ ಪದಕಗಳು ಎಂದಿವೆ, ಇದು 83 ಕಂಚಿನ ಪದಕಗಳು ಎಂದಾಗಬೇಕಿತ್ತು ಅಲ್ಲವೇ?

–ಸಮುದ್ರವಳ್ಳಿ ವಾಸು, ಆಲೂರು

ಹೌದು, ಕಣ್ತಪ್ಪಿಗಾಗಿ ವಿಷಾದಿಸುತ್ತೇವೆ. (- ಸಂ)

### ಸಮಯೋಚಿತ

'ನಿಮ್ಮೊಡನೆ'ಯಲ್ಲಿ 'ಶಿಕ್ಷಕನೆಂದರೆ ಬಾಣಸಿಗನಲ್ಲ!' (ಎನ್. ಉದಯ ಕುಮಾರ್) ಲೇಖನ ಸಮಯೋಚಿತವಾಗಿದೆ.

–ಮೋಹನ್ ರಾಜು ಎಸ್.ಎ., ಶಿವಮೊಗ್ಗ, ಸಂತೇಬೆನ್ನೂರು ಮಂಜಪ್ಪ, ಭದ್ರಾವತಿ, ಕಾಡನೂರು ರಾಮಶೇಷ, ಹುಲಿಮಂಗಲ

### ನಾಯಿ(ಯ) ಭಾಗ್ಯ!

'ವಂಡರ್ ಪುಟದಲ್ಲಿ' ನೆರೆ ರಾಜ್ಯದ ನಟಿಯ ಸಹೋದರರೊಬ್ಬರು ಪರದೇಶದಿಂದ ತಂದು ಸಾಕುತ್ತಿರುವ ನಾಯಿಯ ಅದೃಷ್ಟವನ್ನು ಕಂಡ ಕೆಲವರಿಗಾದರೂ ಹೊಟ್ಟೆ ಉರಿದಿರಬಹುದು.

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಹಾಸ್ಯ ಚೆನ್ನಾಗಿತ್ತು

ಉಪ್ಪಿಟ್ಟಿನ ಒಬ್ಬಟ್ಟು ಹಾಸ್ಯ ಲೇಖನ (ಜಗಲೂರು ಎಂ.ವಿ. ಸ್ವಾಮಿ) ತುಂಬಾ ಚೆನ್ನಾಗಿತ್ತು. ಹಾಗೆ ಇನ್ಮೇಲೆ ಉಪ್ಪಿಟ್ಟಿನ ಸಹವಾಸವೇ ಬೇಡವೆನಿಸಿತು!

–ಓಂ ಚನ್ನೇಶ್ ಅರಬಿಳಚಿ ಕ್ಯಾಂಪ್, ಭದ್ರಾವತಿ

### ಹಾಸ್ಯ ರಹಿತ ಲೇಖನ

ಹಾಸ್ಯ ಲೇಖನವೆಂದು ಬಿಂಬಿತವಾಗಿರುವ 'ಉಪ್ಪಿಟ್ಟಿನ ಒಬ್ಬಟ್ಟು' ಬರಹ ತುಂಬಾ ಬಾಲಿಶವಾಗಿದೆ.

–ಸುಂದರ್, ಬೆಂಗಳೂರು

### ಕಥೆ ಮೆಚ್ಚುಗೆಯಾಯಿತು

ಲೀಲಾ ಮಣ್ಣಾಲ ಅವರ ಕಥೆ 'ಚಿತ್ರಕೂಟದ ತಪ್ಪಲಲ್ಲಿ' ಮೆಚ್ಚುಗೆಯಾಯಿತು.

–ಪ್ರದೀಪ್ ಎನ್., ಚೆಲುವರಸನ ಕೊಪ್ಪಲು, ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ, ಸತ್ಯಬೋಧ, ಬೆಂಗಳೂರು

### ಸುಖೀಭವ

ಸುಖೀಭವ ವಿನೋದ್ ಛಬ್ಬಿ ಅವರ ಅಂಕಣ ಚೆನ್ನಾಗಿ ಮೂಡಿಬರುತ್ತಿತ್ತು. ಇದು ಮುಕ್ತಾಯವಾದದ್ದು ಬೇಸರವಾಯಿತು.

– ಪದ್ಮ, ಬೆಂಗಳೂರು, ಬಿ.ಎನ್. ಸೊಲ್ಲಾಪುರೆ, ಔರಾದ

### ಕಣ್ಣಲ್ಲಿ ನೀರು ಬಂತು

ಆಪ್ತಗೆಳತಿ ವಿಭಾಗದಲ್ಲಿ ತನ್ನ ಮಾನಸಿಕ ಸ್ಥಿತಿಯನ್ನು ವಿವರಿಸಿ ಕರ್ನಾಟಕ ವಿವಿಯ ಒಬ್ಬ ವಿದ್ಯಾರ್ಥಿ ಬರೆದದ್ದು ಅಕ್ಷರಶಃ ಕಣ್ಣಲ್ಲಿ ನೀರು ಬಂತು. ಏಕೆಂದರೆ ನಾನೂ ಇದೇ ಕಾಯಿಲೆಗೆ ಒಳಗಾಗಿ ಚಿಕಿತ್ಸೆ ಪಡೆದು ಇಂದು ಆರೋಗ್ಯವಾಗಿದ್ದೇನೆ.

–ಜಿ.ಎನ್. ಕಟ್ಟೀಮನಿ, ರಾಣೇಬೆನ್ನೂರು